# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**Corporate Identity Number (CIN): U40109KA1999SGC025521**

ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ,ಬೆಂಗಳೂರು – 560009

ಸಂಖ್ಯೆ:ಕವಿಪ್ರನಿನಿ/ಕೆಸಿಒ–143/31932/2021-22/782

ಲಗತ್ತು: ವಿಸ್ತೃತ ಕಾರ್ಯಾದೇಶ ಪ್ರತಿ  ದಿನಾಂಕ: 24.05.2023

## ಸುತ್ತೋಲೆ

ವಿಷಯ: ಕವಿಪ್ರನಿನಿ ಕಚೇರಿಗಳಲ್ಲಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಲು "ಸರಳ್" ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಬಗ್ಗೆ.

ಉಲ್ಲೇಖ: 1) ಕವಿಪ್ರನಿನಿ/ಕೆಸಿಒ–143/43563/2022-23/3746 ದಿನಾಂಕ: 02.12.2022.
2) ವಿಸ್ತೃತ ಕಾರ್ಯಾದೇಶ ಸಂಖ್ಯೆ: ಕವಿಪ್ರನಿನಿ/ಕೆಸಿಒ–143/ 31932/ 2021-22/661 ದಿನಾಂಕ: 18.05.2023.

*******

ಕವಿಪ್ರನಿನಿಯ ಲೆಕ್ಕ ಘಟಕಗಳಿಂದ ಪಡೆದ ಮಾಹಿತಿಯನ್ನು ಗಮನಿಸಲಾಗಿ ಎಲ್ಲಾ ಲೆಕ್ಕ ಘಟಕಗಳಲ್ಲಿಯು ಆದಾಯ ತೆರಿಗೆಯ ರಿಟರ್ನ್ಸ್‌ನ್ನು ತೆರಿಗೆ ಸಲಹೆಗಾರರ ಸೇವೆಯ ಮೂಲಕ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಸೇವೆಗೆ ತೆರಿಗೆ ಸಲಹೆಗಾರರಿಗೆ ಸೇವಾ ಶುಲ್ಕವನ್ನು ಎಲ್ಲಾ ಲೆಕ್ಕ ಘಟಕಗಳಿಂದ ಪ್ರತ್ಯೇಕವಾಗಿ ಪಾವತಿಸಲಾಗಿರುತ್ತದೆ, ಕೆಲವೊಂದು ಲೆಕ್ಕ ಘಟಕಗಳಲ್ಲಿ ನಿಗದಿತ ಅವಧಿ ಮೀರಿದ ನಂತರ ರಿಟರ್ನ್ಸ್ ಫೈಲಿಂಗ್ ಮಾಡಿರುವುದು ಕಂಡು ಬಂದಿರುತ್ತದೆ. ಈ ರೀತಿಯಲ್ಲಿ ನ್ಯೂನತೆಗಳನ್ನು ಸರಿಪಡಿಸುವುದರೊಂದಿಗೆ ವೆಚ್ಚವನ್ನು ಕಡಿತಗೊಳಿಸುವುದು ಅವಶ್ಯಕವಾಗಿರುತ್ತದೆ.

ಈ ಹಿನ್ನಲೆಯಲ್ಲಿ ನಿಗಮ ಕಾರ್ಯಾಲಯವು, ಎಲ್ಲಾ ಲೆಕ್ಕ ಘಟಕಗಳಲ್ಲಿ ತ್ರೈಮಾಸಿಕ ರಿಟರ್ನ್ಸ್ ಫೈಲ್ ಮಾಡಲು ತಂತ್ರಾಂಶವನ್ನು ಅಳವಡಿಸುವುದರಿಂದ ಲೆಕ್ಕ ಘಟಕಗಳ ಕಾರ್ಯವು ಸುಗಮವಾಗುತ್ತದೆಂದು ಅಭಿಪ್ರಾಯಿಸಿ, M/s Relyon Softech Ltd ರವರಿಗೆ Saral TDS Return Software ನ್ನು ಎಲ್ಲಾ ಲೆಕ್ಕ ಘಟಕಗಳಲ್ಲಿ ಅಳವಡಿಸಲು ದಿನಾಂಕ: 18.05.2023 ರಲ್ಲಿ ವಿಸ್ತೃತ ಕಾರ್ಯಾದೇಶವನ್ನು ಹೊರಡಿಸುತ್ತದೆ (ಪ್ರತಿಯನ್ನು ಲಗತ್ತಿಸಿದೆ).

ತತ್ಸಂಬಂಧ ಸದರಿ ಸಂಸ್ಥೆಯವರು ಎಲ್ಲಾ ಲೆಕ್ಕ ಘಟಕಗಳಲ್ಲಿ Saral TDS Return Software ತಂತ್ರಾಂಶವನ್ನು ಅಳವಡಿಸಲಿದ್ದು ತಂತ್ರಾಂಶವನ್ನು ಅಳವಡಿಸಿದ ನಂತರ ಎಲ್ಲಾ ಲೆಕ್ಕ ಘಟಕಗಳು Instalation Certificate ಅನ್ನು ನೀಡಬೇಕಾಗುತ್ತದೆ. ತದನಂತರ, ಸಂಸ್ಥೆಯು Instalation Certificate ನ್ನು ಲಗತ್ತಿಸುತ್ತಾ, ನಿಗಮ ಕಾರ್ಯಲಯಕ್ಕೆ ಕೇಂದ್ರೀಕೃತ ಪಾವತಿಗಾಗಿ ಕ್ರೋಢೀಕೃತ ಬಿಲ್ಲನ್ನು ವ್ಯವಸ್ಥಾಪಕರು (ನಗದು ಮತ್ತು ಲೆಕ್ಕಗಳು) ಶಾಖೆ, ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ) ಕಚೇರಿ ನಿಗಮ ಕಾರ್ಯಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ.

"ಸರಳ್ ಟಿಡಿಎಸ್" ತಂತ್ರಾಂಶವನ್ನು ಬಳಸಿ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವ ಬಗ್ಗೆ ಸದರಿ ಸಂಸ್ಥೆಯಿಂದ ಎಲ್ಲಾ ಲೆಕ್ಕ ಘಟಕಗಳಿಗೆ ಮೂರು ಬಾರಿ Video Conference ಮೂಲಕ ತರಬೇತಿ ನೀಡಲಾಗುತ್ತದೆ. ಆದಾಗ್ಯೂ, ತಂತ್ರಾಂಶವನ್ನು ಬಳಸುವಲ್ಲಿ ಏನಾದರೂ ತೊಂದರೆ ಕಂಡುಬಂದಲ್ಲಿ, ಸದರಿ ಸಂಸ್ಥೆಯ ಸಿಬ್ಬಂದಿಯವರು ಖುದ್ದಾಗಿ ಲೆಕ್ಕ ಘಟಕಕ್ಕೆ ಭೇಟಿ ನೀಡಿ ನ್ಯೂನತೆಯನ್ನು ಸರಿಪಡಿಸುವುದಾಗಿ ತಿಳಿಸಿರುತ್ತಾರೆ. ಅಂತಹ ಸಂದರ್ಭದಲ್ಲಿ, ಸದರಿ ಸಂಸ್ಥೆಯ ಸಿಬ್ಬಂದಿಗಳಿಗೆ ಸಂಪೂರ್ಣ ಸಹಕಾರ / ಮಾಹಿತಿ ನೀಡುವಂತೆ ಕೋರಲಾಗಿದೆ.

ತರಬೇತಿಯ ದಿನಾಂಕವನ್ನು ಮುಂದಿನ ದಿನಗಳಲ್ಲಿ ಸೂಚಿಸಲಾಗುವುದು. ಈ ತರಬೇತಿಯಲ್ಲಿ ಲೆಕ್ಕ ಘಟಕದ ಅಧಿಕಾರಿ ಮತ್ತು ಸಂಬಂಧಪಟ್ಟ ಸಿಬ್ಬಂದಿಯು ಭಾಗವಹಿಸುವಂತೆ ಸೂಚಿಸಲಾಗಿದೆ.

ತಂತ್ರಾಂಶದ ಅಳವಡಿಕೆ, ಕಾರ್ಯನಿರ್ವಹಣೆಯ ಬಗ್ಗೆ ಸಂದೇಹಗಳಿದ್ದಲ್ಲಿ M/s Relyon Softech Ltd ಸಂಸ್ಥೆಯ ಕೆಳಕಂಡ ಸಿಬ್ಬಂದಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

**ಶ್ರೀ. ಅರವಿಂದ. ಜಿ. (Team Leader)**
**ಮೊಬೈಲ್ ಸಂಖ್ಯೆ: 9449599715**

24/5/2023

ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)
ಕವಿಪ್ರನಿನಿ

**ಪ್ರತಿಗಳು:**

1) ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವಲಯ/ಎಸ್.ಎಲ್.ಡಿ.ಸಿ, ಕವಿಪ್ರನಿನಿ.
2) ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾಮಗಾರಿ/ನಿರ್ವಹಣೆ/ಪ್ರಸರಣ/ಆರ್.ಟಿ.ವೃತ್ತ, ಕಾರ್ಯ ಮತ್ತು ನಿರ್ವಹಣೆ ವೃತ್ತ, ಕವಿಪ್ರನಿನಿ.
3) ಅಧೀಕ್ಷಕ ಇಂಜಿನಿಯರ್ (ವಿ), (ಐ.ಟಿ ಮತ್ತು ಎಂ.ಐ.ಎಸ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಕವಿಪ್ರನಿನಿಯ ಅಂತರ್ಜಾಲದಲ್ಲಿ ಪ್ರಕಟಿಸಲು.
4) ಎಲ್ಲಾ ಲೆಕ್ಕಾಧಿಕಾರಿಗಳು, ಪ್ರಸರಣ ಮಾರ್ಗ ಮತ್ತು ಉಪ ಕೇಂದ್ರ ವಿಭಾಗಗಳು, ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ
5) ವ್ಯವಸ್ಥಾಪಕರು (ಆಂತರಿಕ ನಿರ್ವಹಣೆ)/ (ನಗದು ಮತ್ತು ಲೆಕ್ಕಗಳು), ಕವಿಪ್ರನಿನಿ, ಕಾವೇರಿ ಭವನ.
6) M/s Relyon Softech Ltd, ಶ್ರೀಲೇಖ ಕಾಂಪ್ಲೆಕ್ಸ್, 2ನೇ ಮಹಡಿ, ನಂ.73, ವೆಸ್ಟ್ ಆಫ್ ಕಾರ್ಡ್ ರೋಡ್, ಬಸವೇಶ್ವರನಗರ 2ನೇ ಹಂತ, ಮಹಾಲಕ್ಷ್ಮೀಪುರಂ, ಬೆಂಗಳೂರು – 560086.
7) ಮುಖ್ಯ ಕಡತ